ನನ್ನ ಈ ಪಾದರಕ್ಷೆಗಳೊಂದಿಗೆ ಹೋಗಿರಿ. ಈ ತೋಟದ ಗೋಡೆಯ ಆಚೆ, 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ) ಎಂದು ಅದರ ಬಗ್ಗೆ ತನ್ನ ಹೃದಯದಲ್ಲಿ ದೃಢ ವಿಶ್ವಾಸವುಳ್ಳವನಾಗಿ ಸಾಕ್ಷಿ ನುಡಿಯುವ ಯಾರನ್ನಾದರೂ ನೀವು ಭೇಟಿಯಾದರೆ, ಅವನಿಗೆ ಸ್ವರ್ಗದ ಶುಭವಾರ್ತೆ ನೀಡಿರಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ನಾವು ಅಲ್ಲಾಹನ ಸಂದೇಶವಾಹಕರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಸುತ್ತಲೂ ಕುಳಿತಿದ್ದೆವು. ನಮ್ಮೊಂದಿಗೆ ಅಬೂ ಬಕ್ರ್ ಮತ್ತು ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ಸೇರಿ ಕೆಲವು ಸಹಾಬಿಗಳು ಇದ್ದರು. ಆಗ ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಮ್ಮ ಮಧ್ಯದಿಂದ ಎದ್ದು ಹೋದರು, ಮತ್ತು ಹಿಂತಿರುಗಲು ತಡಮಾಡಿದರು. ನಮ್ಮಿಂದ ಬೇರ್ಪಟ್ಟ ಅವರಿಗೆ (ಶತ್ರುಗಳಿಂದ) ಹಾನಿಯಾಗಬಹುದೆಂದು ನಾವು ಭಯಪಟ್ಟೆವು. ನಮಗೆ ಗಾಬರಿಯಾಯಿತು. ನಾವು ಎದ್ದು ನಿಂತೆವು. ಗಾಬರಿಗೊಂಡವರಲ್ಲಿ ನಾನೇ ಮೊದಲಿಗನಾಗಿದ್ದೆ. ನಾನು ಅಲ್ಲಾಹನ ಸಂದೇಶವಾಹಕರನ್ನು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹುಡುಕುತ್ತಾ ಹೊರಟೆನು. ಕೊನೆಗೆ ಬನೂ ನಜ್ಜಾರ್ ಗೋತ್ರದ ಅನ್ಸಾರ್ಗಳ ಒಂದು ತೋಟದ ಬಳಿಗೆ ಬಂದೆನು. ಅದಕ್ಕೆ ಬಾಗಿಲು ಇರಬಹುದೇ ಎಂದು ನಾನು ಅದರ ಸುತ್ತಲೂ ಸುತ್ತಾಡಿದೆನು. ಆದರೆ ನನಗೆ ಸಿಗಲಿಲ್ಲ. ಅಷ್ಟರಲ್ಲಿ, ಹೊರಗಿನ ಬಾವಿಯಿಂದ ತೋಟದ ಒಳಗೆ ಒಂದು ಸಣ್ಣ ನೀರಿನ ಕಾಲುವೆ (‘ರಬೀಅ್’ - ಅಂದರೆ ತೊರೆ) ಹರಿಯುತ್ತಿರುವುದನ್ನು ಕಂಡೆನು. ನಾನು ನನ್ನ ದೇಹವನ್ನು ಕುಗ್ಗಿಸಿಕೊಂಡು ನುಸುಳಿ, ಅಲ್ಲಾಹನ ಸಂದೇಶವಾಹಕರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಬಳಿಗೆ ಹೋದೆನು. ಅವರು (ನನ್ನನ್ನು ನೋಡಿ) ಹೇಳಿದರು: "ಅಬೂ ಹುರೈರಾ". ನಾನು ಹೇಳಿದೆನು: "ಹೌದು, ಓ ಅಲ್ಲಾಹನ ಸಂದೇಶವಾಹಕರೇ". ಅವರು ಕೇಳಿದರು: "ನೀವೇಕೆ ಬಂದಿರಿ?". ನಾನು ಹೇಳಿದೆನು: "ನೀವು ನಮ್ಮ ಮಧ್ಯದಲ್ಲಿದ್ದಿರಿ. ನಂತರ ನೀವು ಎದ್ದುಹೋದಿರಿ ಮತ್ತು ಹಿಂತಿರುಗಲು ತಡ ಮಾಡಿದಿರಿ. ನಮ್ಮಿಂದ ಬೇರ್ಪಟ್ಟ ನಿಮಗೆ ಹಾನಿಯಾಗಬಹುದೆಂದು ನಾವು ಭಯಪಟ್ಟೆವು. ನಮಗೆ ಗಾಬರಿಯಾಯಿತು. ಗಾಬರಿಗೊಂಡವರಲ್ಲಿ ನಾನೇ ಮೊದಲಿಗನಾಗಿದ್ದೆ. ನಾನು ಈ ತೋಟದ ಬಳಿಗೆ ಬಂದೆನು, ಮತ್ತು ನರಿಯು ನುಸುಳುವಂತೆ ನಾನು ನುಸುಳಿ ಬಂದೆನು. ಆ ಜನರು (ಇತರ ಸಹಾಬಿಗಳು) ನನ್ನ ಹಿಂದೆಯೇ ಇದ್ದಾರೆ". ಆಗ ಅವರು ಹೇಳಿದರು: "ಓ ಅಬೂ ಹುರೈರಾ". ಅವರು ತಮ್ಮ ಪಾದರಕ್ಷೆಗಳನ್ನು ನನಗೆ ನೀಡಿದರು. ಅವರು ಹೇಳಿದರು: "ನನ್ನ ಈ ಪಾದರಕ್ಷೆಗಳೊಂದಿಗೆ ಹೋಗಿರಿ. ಈ ತೋಟದ ಗೋಡೆಯ ಆಚೆ, 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯನಿಲ್ಲ) ಎಂದು ಅದರ ಬಗ್ಗೆ ತನ್ನ ಹೃದಯದಲ್ಲಿ ದೃಢ ವಿಶ್ವಾಸವುಳ್ಳವನಾಗಿ ಸಾಕ್ಷಿ ನುಡಿಯುವ ಯಾರನ್ನಾದರೂ ನೀವು ಭೇಟಿಯಾದರೆ, ಅವನಿಗೆ ಸ್ವರ್ಗದ ಶುಭವಾರ್ತೆ ನೀಡಿರಿ". ನಾನು ಭೇಟಿಯಾದವರಲ್ಲಿ ಮೊದಲಿಗರು ಉಮರ್ ಆಗಿದ್ದರು. ಅವರು ಕೇಳಿದರು: "ಓ ಅಬೂ ಹುರೈರಾ, ಈ ಪಾದರಕ್ಷೆಗಳು ಏನು?". ನಾನು ಹೇಳಿದೆನು: "ಇವು ಅಲ್ಲಾಹನ ಸಂದೇಶವಾಹಕರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಪಾದರಕ್ಷೆಗಳು. ಅವರು ನನ್ನನ್ನು ಇವುಗಳೊಂದಿಗೆ ಕಳುಹಿಸಿದ್ದಾರೆ. ಯಾರು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಅದರ ಬಗ್ಗೆ ತನ್ನ ಹೃದಯದಲ್ಲಿ ದೃಢ ವಿಶ್ವಾಸವುಳ್ಳವನಾಗಿ ಸಾಕ್ಷಿ ನುಡಿಯುತ್ತಾರೋ ಅವರನ್ನು ನಾನು ಭೇಟಿಯಾದರೆ, ಅವರಿಗೆ ಸ್ವರ್ಗದ ಶುಭವಾರ್ತೆ ನೀಡಬೇಕೆಂದು". ಆಗ ಉಮರ್ ತಮ್ಮ ಕೈಯಿಂದ ನನ್ನ ಎದೆಯ ನಡುವೆ ಹೊಡೆದರು, ನಾನು ನನ್ನ ಪೃಷ್ಠದ ಮೇಲೆ ಬಿದ್ದೆನು. ಅವರು ಹೇಳಿದರು: "ಓ ಅಬೂ ಹುರೈರಾ, ಹಿಂತಿರುಗಿ ಹೋಗಿ". ನಾನು ಅಲ್ಲಾಹನ

[صحيح] [رواه مسلم]

ಸಿದ್ಧನಾಗಿ ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಬಳಿಗೆ ಹಿಂತಿರುಗಿದೆನು. ಉಮರ್ ನನ್ನನ್ನು ಹಿಂಬಾಲಿಸಿ ನನ್ನ ಹಿಂದೆ ನಡೆದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಕೇಳಿದರು: ಓ ಅಬೂ ಹುರೈರಾ, ನಿಮಗೇನಾಯಿತು? ನಾನು ಹೇಳಿದೆನು: ನಾನು ಉಮರ್ ಅವರನ್ನು ಭೇಟಿಯಾದೆನು, ಮತ್ತು ನೀವು ನನ್ನನ್ನು ಕಳುಹಿಸಿದ ವಿಷಯವನ್ನು ಅವರಿಗೆ ತಿಳಿಸಿದೆನು. ಆಗ ಅವರು ನನ್ನ ಎದೆಯ ಮೇಲೆ ಒಂದು ಹೊಡೆತ ಹೊಡೆದರು. ನಾನು ನನ್ನ ಪೃಷ್ಠದ ಮೇಲೆ ಬಿದ್ದೆನು. ಅವರು 'ಹಿಂತಿರುಗು' ಎಂದು ಹೇಳಿದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: ಓ ಉಮರ್, ನೀವು ಹೀಗೆ ಮಾಡಲು ನಿಮ್ಮನ್ನು ಪ್ರೇರೇಪಿಸಿದ್ದೇನು? ಉಮರ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನನ್ನ ತಂದೆ ತಾಯಿ ನಿಮಗಾಗಿ ಸಮರ್ಪಿತರಾಗಲಿ. ಯಾರು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಅದರ ಬಗ್ಗೆ ತನ್ನ ಹೃದಯದಲ್ಲಿ ದೃಢ ವಿಶ್ವಾಸವುಳ್ಳವನಾಗಿ ಸಾಕ್ಷಿ ನುಡಿಯುತ್ತಾರೋ ಅವರನ್ನು ಭೇಟಿಯಾದರೆ ಅವರಿಗೆ ಸ್ವರ್ಗದ ಶುಭವಾರ್ತೆ ನೀಡಬೇಕೆಂದು ನೀವು ಅಬೂ ಹುರೈರಾ ಅವರನ್ನು ನಿಮ್ಮ ಪಾದರಕ್ಷೆಗಳೊಂದಿಗೆ ಕಳುಹಿಸಿದಿರಾ? ಅವರು “ಹೌದು” ಎಂದು ಉತ್ತರಿಸಿದರು. ಉಮರ್ ಹೇಳಿದರು: ಹಾಗೆ ಮಾಡಬೇಡಿ. ಏಕೆಂದರೆ, ಜನರು (ಕೇವಲ) ಆ ವಚನದ ಮೇಲೆ ಮಾತ್ರ ಭರವಸೆಯಿಟ್ಟು ಕರ್ಮವೆಸಗುವುದನ್ನು ಬಿಟ್ಟು ಬಿಡಬಹುದೆಂದು ನಾನು ಭಯಪಡುತ್ತೇನೆ. ಅವರನ್ನು ಬಿಟ್ಟುಬಿಡಿ, ಅವರು ಕರ್ಮವೆಸಗುತ್ತಿರಲಿ. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: ಹಾಗಾದರೆ ಅವರನ್ನು (ಕರ್ಮವೆಸಗುತ್ತಿರಲು) ಬಿಟ್ಟುಬಿಡಿ.

http://www.sunnah.global/hadeeth/kn/show/10094